ಮಾನ್ಯ ಉಪಸಭಾಧ್ಯಕ್ಷರೇ, ಈ ವೈದ್ಯಕೀಯ ಕಾಲೇಜುಗಳ ಪ್ರವೇಶದ ಬಗ್ಗೆ ಮಾನ್ಯ ಆರೋಗ್ಯ ಸಚಿವರು ಹೇಳಿಕೆ ನೀಡುವುದಕ್ಕೆ ತಯಾರಾಗಿದ್ದಾರೆ. ಅದನ್ನವರು ನೀಡಲಿ.

SRI G. B. SHANKAR RAO.—Let it be taken up on Monday if the hon. members so desire.

MR. DEPUTY SPEAKER.—It will be taken up on Monday.

ಡಾ॥ ಹೆಚ್. ಎಲ್. ತಿಮ್ಮೇಗೌಡ.—ಮಾನ್ಯ ಉಪಾಧ್ಯಕ್ಷರೇ, ಬಿ.ಎಡ್. ಕಾಲೇಜುಗಳಿಗೆ ಇನ್‌ಟೇಕ್ ನಿಗದಿ ಮಾಡದೆ ಇರುವುದರಿಂದ ಇನ್ನೂ ಪ್ರವೇಶಕ್ಕೆ ಅವಕಾಶವಿಲ್ಲದಂತಾಗಿದೆ. ಆದುದರಿಂದ, ಮಾನ್ಯ ಸಚಿವರುಗಳು ತಾಂತ್ರಿಕ ಮತ್ತು ವೈದ್ಯಕೀಯ ಕಾಲೇಜುಗಳ ಬಗ್ಗೆ ಹೇಳಿಕೆ ಕೊಡುವಾಗ ಬಿ.ಎಡ್. ಕಾಲೇಜುಗಳ ಬಗ್ಗೆಯೂ ತಯಾರಾಗಿ ಬರಬೇಕೆಂದು ಹೇಳುತ್ತೇನೆ.

ಶ್ರೀ ಜಿ. ಬಿ. ಶಂಕರರಾವ್.—ಬಿ.ಎಡ್. ಕಾಲೇಜುಗಳಿಗೆ ಇನ್‌ಟೇಕ್ ನಿಗದಿಮಾಡಿ ಎರಡು ದಿವಸ ವಾಯಿತು. We have already communicated to the respective institutions with regard to the intake of students in each B.Ed. college.

ಶ್ರೀ ಪಿ. ರಾಂದೇವ್.—ದಯವಿಟ್ಟು ಅದರ ವಿವರ ಕೊಡುತ್ತೀರಾ ?

SRI G. B. SHANKAR RAO.—It is a long list of nearly 47 colleges.

SRI P. RAMADEV.—Many colleges have not received it.

ಶ್ರೀ ಎಂ. ಚಂದ್ರಶೇಖರ್.—ಇದನ್ನು ಮಾನ್ಯ ಸಚಿವರು ಬಹಳ ಲಘುವಾಗಿ ತೆಗೆದುಕೊಳ್ಳುತ್ತಿದ್ದಾರೆಂದು ಕಾಣುತ್ತಿದೆ. ಕ್ಯಾಪಿಟೆಷನ್ ಶುಲ್ಕವನ್ನು ರದ್ದು ಮಾಡಲಾಗುವುದೆಂದು ಪ್ರಧಾನ ಮಂತ್ರಿಗಳು ಹೇಳುತ್ತಿದ್ದಾರೆ. ಆದರೆ, ಇಲ್ಲಿ ಖಾಸಗಿ ವೈದ್ಯಕೀಯ ಕಾಲೇಜುಗಳಲ್ಲಿ ೧.೬೦ ಲಕ್ಷ ಕ್ಯಾಪಿಟೇಷನ್ ಶುಲ್ಕವಿದ್ದುದು ೨ ರಿಂದ ೨.೫೦ ಲಕ್ಷದವರೆಗೆ ಏರುವ ಹಾಗೆ ಕಾಣುತ್ತಿದೆ. ತಮಗಿರುವ ಕೋಟಾ ಕಡಮೆ ಇರುವುದರಿಂದ ಈಗಲೇ ಸಾಧ್ಯವಾದಷ್ಟು ವಸೂಲಾಮಾಡಬೇಕೆಂದು ಖಾಸಗಿ ಕಾಲೇಜುಗಳವರು ಹೇಳುತ್ತಿದ್ದಾರೆ. ಹೀಗೆ ಪರಿಸ್ಥಿತಿ ಗೊಂದಲಮಯವಾಗಿರುವುದರಿಂದ ಮಾನ್ಯ ಸಚಿವರು ಇದನ್ನು ಲಘುವಾಗಿ ತೆಗೆದುಕೊಳ್ಳಬಾರದೆಂದು ಹೇಳಬಯಸುತ್ತೇನೆ ಇನ್ನು, ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಐವತ್ತು ಸಾವಿರ.....

MR. DEPUTY SPEAKER.—We will take up this matter on Monday and it das been agreed upon.

SRI M. CHANDRASHEKAR.—By the time they announce what will be rate ?

PAPERS LAID ON THE TABL

SRI Y. RAMAKRISHNA (Minister for Law & Parliamentary Affairs, Veterinary and Animal Husbandry).—I beg to lay :

"Notification No. AAH 236 VAD 81 dated 17th June 1981.

Prevention of spread of Rinderpest Diseases as required under section 37 of the Karnataka Animal Diseases (Control) Act, 1961."

MR. DEPUTY SPEAKER.—Papers laid.